ಈ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಭಾರೀ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಒಟ್ಟು ರೂ.10681.52 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

3609 (3847) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು)– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಹರಿಜನ ಗಿರಿಜನ ಕಲ್ಯಾಣಕ್ಕಾಗಿ ವಿಶೇಷ ಘಟಕ ಯೋಜನೆಯಡಿ ಮೀಸಲಿಟ್ಟ ಹಣ ಎಷ್ಟು; ಖರ್ಚು ಮಾಡಿದ ಹಣವೆಷ್ಟು ;

ಆ) ಮೀಸಲಿಟ್ಟ ಹಣವನ್ನು ಖರ್ಚು ಮಾಡದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು, ಈ ಹಣವನ್ನು ಬೇರೆ ಯಾವುದಾದರೂ ಬಾಬ್ತಿಗೆ ಖರ್ಚು ಮಾಡಲಾಗಿದೆಯೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ)2004–05ನೇ ಸಾಲಿನಲ್ಲಿ ಸಣ್ಣನೀರಾವರಿ ಇಲಾಖೆಗೆ ವಿಶೇಷ ಘಟಕ ಯೋಜನೆ ಹಾಗೂಗಿರಿಜನ ಉಪಯೋಜನೆ ಮೀಸಲಿಟ್ಟ ಹಾಗೂ ವೆಚ್ಚ ಮಾಡಿದ ಹಣದ ವಿವರಗಳು ಈಕೆಳಕಂಡಂತಿವೆ :

(ರೂ.ಲಕ್ಷಗಳಲ್ಲಿ)

ವಿಶೇಷ ಘಟಕ ಯೋಜನೆ		ಗಿರಿಜನ ಕಲ್ಯಾಣ ಉಪಯೋಜನೆ	
ಅನುದಾನ	ಖರ್ಚು	ಅನುದಾನ	ಖರ್ಚು
51.95	11.44	22.56	6.39

ಆ) ಆರ್ಥಿಕ ಇಲಾಖೆಯಿಂದ ಬಿಡುಗಡೆಯಿಂದ ಎಲ್ಲಾ ಮೊತ್ತವನ್ನು ಖರ್ಚುಮಾಡಲಾಗಿದೆ ಹಾಗೂ ಈ ಯೋಜನೆಗಳಡಿಯಲ್ಲಿ ಬಿಡುಗಡೆಯಿಂದ ಅನುದಾನವನ್ನು ಬೇರೆ ಯಾವುದೇ ಬಾಬ್ತಿಗೆ ಖರ್ಚು ಮಾಡಿರುವುದಿಲ್ಲ.

3610 (4025) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?